# ಏಕೆ ಗೋಪಾಲ ಕರೆಯುತಾನೆ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 59.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 121.
3. **Note:** Lyrics given without highlights are as per Ref. 1 and the wordings given in yellow highlights are as per Ref. 2.

ರಾಗ: ಸೌರಾಷ್ಟ್ರ                ತಾಳ: ಅಟ

ಏಕೆ ಗೋಪಾಲ ಕರೆಯುತಾನೆ - ಎಲೆ ಸಖಿಯೆ ಎನ್ನ
ಏಕೆ ಗೋಪಾಲ ಕರೆಯುತಾನೆ ?     ॥ ಪ ॥

ಕಣ್ಣ ಸನ್ನೆ ಮಾಡುತಾನೆ – ಮತ್ತೆ ಬಗೆ ಬಗೆ
ಹಣ್ಣ ಕೈಯಲಿ ತೋರುತಾನೆ – ಎನ್ನ ಚೆಲುವಿಕೆ
ಬಣ್ಣಿಸುತಲಿ ತಿರುಗುತಾನೆ – ಇವನೇನೆ
ಇನ್ನೂರು ವರಹಗಳ ಕೊಟ್ಟು ಮದುವೆಯಾದನೇನೆ, ಎಲೆ ಸಖಿಯೆ     ॥ 1 ॥

ಹವಳ ಸರವ ತೋರುತಾನೆ – ದುಂಡು ಮುತ್ತಿನ –
ಧವಳ ಹಾರವ ನೀಡುತಾನೆ – ಹಾಸಿಗೆಯ ಮೇಲೆ
ಪವಡಿಸಬೇಕೆನುತಾನೆ – ಇವನೊಡನಿರಲು ನ-
ಮ್ಮವರು ಸುಮ್ಮನೆ ಇಹರೇನೆ – ಎಲೆ ಸಖಿಯೆ     ॥ 2 ॥

ಬಟ್ಟಲ ಪಿಡಿದು ಬರುತಾನೆ – ಹಗಲೆ ಬಾ ಎಂದು
ಬಟ್ಟ ಬಯಲೊಳು ಕರೆಯುತಾನೆ – ಎನ್ನ ಮನದೊಳು
ಧಟ್ಟು ಧಿಗಿಲು ಎನ್ನದೇನೆ – ಪುರಂದರ ವಿಠಲ –
ಇಟ್ಟು ಕೊರಳಾಣೆ ಈಗ ಬಾ ಎಂಬುವನೆ – ಎಲೆ ಸಖಿಯೆ     ॥ 3 ॥

**Note:** The lyrics given below are as per Ref. 2 above. These wordings are slightly different. Hence, they are given separately in yellow highlights.

ರಾಗ: ಸಾರಂಗ                ತಾಳ: ಆದಿ

ಏಕೆ ಗೋಪಾಲ ಕರೆಯುತಾನೆ, ಎಲೆ ಸಖಿಯೆ, ಎನ್ನ

ಏಕೆ ಗೋಪಾಲ ಕರೆಯುತಾನೆ || ಪ ||

ಕಣ್ಣು ಸನ್ನೆಯ ಮಾಡುತಾನೆ ಮಾತು ಬಗೆಬಗೆ,
ಹಣ್ಣು ಕೈಯಲಿ ತೋರುತಾನೆ, ಎನ್ನ ಚೆಲುವಿಕೆ
ಬಣ್ಣಿಸುತಲಿ ತಿರುಗುತಾನೆ, ಇವ ನೂರು ವರಹ
ಕಾಣಿಕೆ ಕೊಟ್ಟು ಎನ್ನ ಮದುವೆಯಾಗಿಹನೇನೆ || 1 ||

ಹವಳ ಸರವ ತೋರುತಾನೆ, ದುಂಡು ಮುತ್ತಿನ
ಧವಳ ಹಾರವ ಬೀಸುತಾನೆ, ಒಂದ್ಹಾಸಿಗೆ ಮೇಲೆ
ಇವ ಹಗಲೆ ಬಾರೆಂದು ಕರೆಯುತಾನೆ, ಕಾಮನಾಟಕೆ
ಹವಣಿಪುದು ಕಂಡರೆ ನಮ್ಮವರು ಸುಮ್ಮನೆ ಇಹರೇನೆ || 2 ||

ಬಗಲು ಬಿಗಿದಪ್ಪುತಾನೆ ನೋಡೆ, ಬಟ್ಟ ಬಯಲೊಳು
ಮೊಗಕೆ ಮೊಗವಿಟ್ಟು ಮುದ್ದಿಸುತಾನೆ, ಎನ್ನ ಮನಸು
ಧಿಗಿಲು ಧಿಗಿಲೆಂದು ನಡುಗಿತು ಕಾಣೆ, ಪುರಂದರ ವಿಠಲನೆ
ಮಿಗಿಲಾಗಿ ಮನ್ನಿಸಿ ನನ್ನ ಮಗನಾಣೆ ಇಟ್ಟು ಮರಳಿ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೋಪವಧು ಒಬ್ಬಳು ತನ್ನನ್ನು ಸನ್ನೆಮಾಡಿ ಕರೆಯುವ ಬಾಲಕೃಷ್ಣನನ್ನು ಕುರಿತು ತನ್ನ ಸಖಿಯ ಮುಂದೆ ಆಡಿದ ಮಾತುಗಳಿವು.

**ಧಟ್ಟು ಧಿಗಿಲು** = ಗಾಬರಿಯಿಂದ ಎದೆ ಡವಡವ ಎನ್ನುವುದು.

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, gopi, Gopala, kannu, kai, hannu, rokka, maduve, hasige, muttu, hagalu, mana,
**Pravachana:** NA
**Explanation:** NA